

# ಬಾಹುಬಲಿಯ ಶಿಲ್ಪಿ

■ ಜಿ.ಎಸ್.ವಸಂತಮಾಲ

ಆಕಾಶದೆತ್ತರಕ್ಕೆ ನಿಂತಿದ್ದ ಬಾಹುಬಲಿಯನ್ನು ನೋಡಿದ ಶಿಲ್ಪಿಗೆ ಕಣ್ತುಂಬಿ ಬಂದಿತ್ತು. ಇಷ್ಟು ದೊಡ್ಡ ಮೂರ್ತಿಯನ್ನು ನಾನು ಕೆತ್ತಿದೆನೆ? ಎಂಥ ಸುಂದರವಾದ ಮೈಮಾಟ! ಅರೆ ಅರಳಿದ ಕಂಗಳು. ಆದರೂ ಏನೋ ಪ್ರಭೆ ಕಾಣುತ್ತಿಲ್ಲ ಅನಿಸುತ್ತಿದೆಯಲ್ಲ. ಇನ್ನು ಜೀವಂತಿಕೆ ತುಂಬ ಬೇಕು. ಆದರೆ ಹೇಗೆ? ಹೇಗೆ? ಯೋಚಿಸುತ್ತಾ ಯೋಚಿಸುತ್ತಾ ತಲೆ ಭಾರವಾಗತೊಡಗಿತು. ಮನಸ್ಸಿಗೂ ತನುವಿಗೂ ದಣಿವಾಗಿದೆ ಎನಿಸಿತು. ಇಂದಿಗೆ ಕೆಲಸ ಸಾಕು ಎಂದು ಕೊಂಡವನೆ ಸುತ್ತಿಗೆ ಚಾಣವನ್ನು ತನ್ನ ಮೈಗೆ ಅಂಟಿಕೊಂಡಿದ್ದ ಚೀಲದೊಳಗಿಟ್ಟ. ನಿಧಾನವಾಗಿ ಅಟ್ಟಣಿಗೆಯಿಂದ ಇಳಿದು ತನ್ನ ಡೇರೆಯತ್ತ ನಡೆದ.

ಡೇರೆಗೆ ಬಂದವನೆ ಗಟಗಟನೆ ನೀರು ಕುಡಿದು ಚಾಪೆಯ ಮೇಲೆ ಕಾಲುಚಾಚಿ ಮಲಗಿದ. ಒಂದೆರಡು ಕ್ಷಣಗಳಲ್ಲಿ ನಿದ್ದೆ ಆವರಿಸಿತ್ತು. ಅರೆ ಮಂಪರು. ಯಾರೋ ತನ್ನ ಸುತ್ತ ಓಡಾಡಿದಂತೆ ಅನಿಸತೊಡಗಿತು. ಗೆಜ್ಜೆಯ ಕಿರುದನಿ ಅವನನ್ನು ಆವರಿಸತೊಡಗಿತು. ಲಯಬದ್ಧ ನಾದ. ಶಿಲ್ಪಿಯನ್ನು ಮುದಗೊಳಿಸಿತು. ನೂಪುರ ಧ್ವನಿ ಎಲ್ಲಿಂದ ಬರುತ್ತಿದೆ ಎಂದು ಆಲಿಸತೊಡಗಿದ. ಆ ಧ್ವನಿ ಸಮೀಪವಾಗತೊಡಗಿದಾಗ, ಶಿಲ್ಪಿ ಕಣ್ಣರಳಿಸಿ ನೋಡಿದ.

'ಯಾರು?' ಎಂದ ಮೆಲ್ಲಗೆ. ಆದರೆ ಎದುರು ನಿಂತಿದ್ದ ಸರ್ವಾಲಂಕಾರ ಭೂಷಿತೆ ಮಾತನಾಡದೆ ಶಿಲ್ಪಿಯತ್ತ ನೋಡುತ್ತಿದ್ದಳು. ಶಿಲ್ಪಿ ನಗುತ್ತಾ ಕೇಳಿದ. 'ಯಾರಮ್ಮ ನೀನು? ಈ ಕಗ್ಗಾಡಿನಲ್ಲಿ ಒಬ್ಬಂಟಿಯಾಗಿ ಯಾಕೆ ತಿರುಗುತ್ತಿರುವೆ? ಬೇಗ ಬೀಡಿಗೆ ಹಿಂದಿರುಗು.'

'ಶಿಲ್ಪಿಗಳೇ ಈ ಕಾಡು ನಾಡೇ ನನ್ನರಮನೆ. ಹಗಲು ರಾತ್ರಿ ಇಲ್ಲೇ ವಿಹರಿಸುತ್ತೇನೆ. ಕಲ್ಲು ಕುಟ್ಟುವ ಕಟುಕುಟು ಶಬ್ದ ಕೇಳಿತು, ಬಂದೆ. ಎದುರಿಗೆ ಬಾಹುಬಲಿ ನಿಂತಿದ್ದಾರೆ. ಸಂತಸವನ್ನು ತಡೆಯಲಾರದೆ ಅವನನ್ನು ರೂಪುಗೊಳಿಸಿದ ನಿಮ್ಮನ್ನು ನೋಡಲು ಬಂದೆ.'

'ಅಮ್ಮಾ ತಾಯಿ, ಯಾರು ನೀವು? ಖೇಚರಿಯೋ? ವನದೇವತೆಯೋ?'

ನಾನು ನಿಮ್ಮಂತೆ ಮನುಷ್ಯಳು. ಗೊಮ್ಮಟನನ್ನು ನೋಡಲು ಬಂದೆ. ಪ್ರಥಮ ಮನ್ಮಥ ಬಾಹುಬಲಿಯಂತೆ ಶಿಲ್ಪವೂ ಅತಿ ಮನೋಹರ. ಸೊಗಸಾದ ಮೈಮಾಟ. ನೋಡುತ್ತಲೇ ಇರಬೇಕೆಂಬ ಬಯಕೆ ಇಂಗುವುದೇ ಇಲ್ಲ. ಅಷ್ಟೊಂದು ಸುಂದರವಾಗಿದೆ.'

'ಸಾಕ್ಷಾತ್ ಬಾಹುಬಲಿ ಪ್ರಭುವನ್ನೇ ನೋಡುತ್ತಿರುವಂತೆ ಹೇಳುತ್ತಿರುವೆಯಲ್ಲ?'

'ಅವರನ್ನು ನೋಡಿರುವುದಕ್ಕೆ ಅವರ ಸೌಂದರ್ಯದ ವರ್ಣನೆ ಮಾಡುತ್ತಿರುವುದು. ಪಚ್ಚೆ ಮೈ ಬಣ್ಣ. ಸ್ವಾಮಿಯ ಗುಂಗುರು ಕೂದಲು ಅವರ ಚೆಲುವನ್ನು ಇಮ್ಮಡಿಗೊಳಿಸಿತ್ತು. ಹರವಾದ ಎದೆ. ದಷ್ಟಪುಷ್ಟವಾದ ಕೈಕಾಲುಗಳು. ಎಲ್ಲರನ್ನು ಆಕರ್ಷಿಸುತ್ತಿತ್ತು ಅಬ್ಬಬ್ಬಾ! ಆ ಸೌಂದರ್ಯ. ಆ ಕಾಲದ ಕಾಮದೇವರು. ಶಿಲ್ಪಿಗಳೇ, ಅವರ ಆಸ್ಥಾನದಲ್ಲಿ ನಿತ್ಯ ನೃತ್ಯ ಮಾಡುತ್ತಿದ್ದೆ. ನಾನು ರಾಜನರ್ತಕಿ. ನನ್ನ ಹೆಸರು ಚಿರಂಜೀವಿ ವಸುಂಧರೆ. ನೃತ್ಯ ಮಾಡುವಾಗ ಅವರೆಂದು ಕೆಟ್ಟದೃಷ್ಟಿಯಿಂದ ನೋಡಲೇ ಇಲ್ಲ. ನಾನೇ ಅವರಿಗಾಗಿ ಹಂಬಲಿಸುತ್ತಿದ್ದೆ. ಆದರೆ ಅವರು ಮಹಾರಾಣಿಯನ್ನು ಬಿಟ್ಟು ಎಲ್ಲ ಹೆಂಗಳೆಯರನ್ನು ತಮ್ಮ ಒಡಹುಟ್ಟಿದವರಂತೆ ಕಾಣುತ್ತಿದ್ದರು. ಅದು ಅವರ ದೊಡ್ಡ ಗುಣ.'

'ಬಾಹುಬಲಿ ಅಪ್ರತಿಮ ಸುಂದರ, ಮಹಾಬಲಶಾಲಿ, ಸದ್ಗುಣಿ ಎಂದೆಲ್ಲ ಹೊಗಳುತ್ತ ಇರುವೆಯಲ್ಲ, ಇಂಥವನು ಅಣ್ಣನೆಂಬ ಗೌರವ ತೋರದೆ, ಅವರೊಂದಿಗೆ ಯುದ್ಧಕ್ಕೆ ನಿಂತದ್ದು ತಪ್ಪಲ್ಲವೆ ತಾಯಿ?'

'ತಪ್ಪು ಹೇಗಾದೀತು ಶಿಲ್ಪಿಗಳೇ, ಆತ್ಮಾಭಿಮಾನವನ್ನು ಕೆಣಕಿದರೆ, ಒಂದು ಮಗು ಕೂಡ ಸಿಡಿದೇಳುವುದಿಲ್ಲವೆ? ಸ್ವಾಭಿಮಾನಿಯಾದ ಬಾಹುಬಲಿ ಸುಮ್ಮನಿರುವರೆ? ಅವರನ್ನು ಕೆಣಕಿ ಚಕ್ರವರ್ತಿಗಳು ತಪ್ಪು ಮಾಡಿದರು ಶಿಲ್ಪಿಗಳೇ.'

'ಚಕ್ರವರ್ತಿಗಳ ತಪ್ಪೇನಿದೆ ಹೇಳು. ಚಕ್ರರತ್ನ ಪಟ್ಟಣ ಪ್ರವೇಶಿಸಬೇಕಾದರೆ ಸಮರಗೈಯುವುದು ಅನಿವಾರ್ಯವಾಗಿತ್ತು. ತಮ್ಮಂದಿರೆಂದರೆ ಅವರಿಗೆ ಅತಿಯಾದ ಪ್ರೀತಿ. ಆದರೆ ಪ್ರೀತಿಗಿಂತ ಕರ್ತವ್ಯ ಮುಖ್ಯವಲ್ಲವೆ ತಾಯಿ?'